ಮೈಸೂರ ಗೆಜೆಟ.

ಸರ್ಕಾರದಿಂದ ಪ್ರಾಯಿಷ್ಠಲದ್ದು.

ಬೆಂಗಳೂರು, ಶನಿವಾರ ಸೆಪ್ಟೆಂಬರ್ ತಾ|| 13, ಸ್ಟ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಮೈಸೂರು ಗವರ್ನಮೆಂಟ್ ಲೆಜಿಸ್ಲೇಟಿವ್ ಇಲಾಖಾ.

ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಮಂಜೂರಾದ ರೆಗ್ಯುಲೇಷ್ಟಗಳು.

1890ನೇ ಇಸವಿಯ IIನೇ ನಂಬರ್ ರೆಗ್ಯುಲೇಷ್ಟ.

ಇದರಡಿ ಕಂಡ ರೆಗ್ಯುಲೇಷ್ಟ 1890ನೇ ಇಸವಿ ಜೂ್ಟ 13ನೇ ತಾರೀಖಿನಲ್ಲಿ ಘನವನ್ನು ಹೊಂದಿದ ಶ್ರೀಮನ್ಮಹಾರಾಜರಾಜಾಸಾಹೆಬ್ ಬಹದ್ದೂರವರು ಮಂಜೂರಾತಿಯಂ ಪಡೆದು ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತಿದೆ.

1884ನೇ ಇಸವಿಯ Iನೇ ನಂಬರ್ ಮೈಸೂರ್ ಚೀಫ್ ಕೋರ್ಟು ರೆಗ್ಯುಲೇಷನನ್ನು ತಿದ್ದುಪಾಡು ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷ್ಟ.

ಸ್ಟ 1884ನೇ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನನ್ನು ಕೆಲವು ಭಾಗಗಳಲ್ಲಿ ತಿದ್ದುಪಾಡು ಮಾಡಬೇಕಾದದ್ದು ಯುಕ್ತವೆಂದು ಕಂಡು ಬಂದದರಿಂದ ಘನವನ್ನೈದಿದ ಶ್ರೀಮನ್ಮಹಾರಾಜರವರು ಮೇಲೆ ಕಂಡ ರೆಗ್ಯುಲೇಷನಿನ 12, 13, 14 15 ಮತ್ತು 16ನೇ ಸೆಕ್ಷ್ಟಗಳಿಗೆ ಬದಲಾಗಿ ಇದರಡಿ ಕಂಡವಂ ಸೇರಿಸತಕ್ಕದ್ದೆಂದು ನಿಬಂಧಿಸಿರುತ್ತಾರೇನೆಂದರೆ:—

ಚೀಫ್ ಕೋರ್ಟಿನ ಸಾಧಾರಣ ಅಸಲ್ ಸಿವಿಲ್ ಮತ್ತ ಕ್ರಿಮಿನಲ್ ಅಧಿಕಾರ.

"ಸೆಕ್ಷ್ಟ 12. (1) ಮೈಸೂರು ಗವರ್ನಮೆಂಟಿನವರು ಯುಕ್ತವೆಂದು ಯಾವಾಗಲಾದರು ಭಾವಿಸಿದಾಗ ಸರ್ಕಾರೀ ಗೆಜಟಿನಲ್ಲಿ ಇಸ್ತಿಹಾರನಾಮೆಯ ಮೂಲಕ ಸಿವಿಲ್ ಸ್ವಭಾವವುಳ್ಳ ತಮಾಂ ನೊಕದ್ದವೆಗಳಲ್ಲೂ ನಡವಳಿತಗಳಲ್ಲೂ ಬಂದು ಡಿಸ್ಟ್ರಿಕ್ಟ್ ಕೋರ್ಟಿನ ಸಾಧಾರಣ ಅಸಲ್ ಸಿವಿಲ್ ಅಧಿಕಾರವನ್ನೂ—ಯಾ—ಬಂದು ಸೆಷನ್ಸ್ ಕೋರ್ಟಿನ ಸಾಧಾರಣ ಅಸಲ್ ಕ್ರಿಮಿನಲ್ ಅಧಿಕಾರವನ್ನೂ ಅಥವಾ ಅಂತಾ ಯೆರೆಡು ಅಧಿಕಾರಗಳನ್ನೂ ಸದರೀ ಗವರ್ನಮೆಂಟಿನವರು ಆಗಿಂದಾಗ್ಗೆ ಆ ಬಗ್ಗೆ ಪ್ರಕಟಿಸಬಹುದಾದ ಮತ್ತು ಮೊಕರರ್ರಾಡಬಹುದಾದ ಸ್ಥಳ ಸರಹದ್ದುಗಳೊಳಗಾಗಿ ಚಲಾಯಿಸಲಿಕ್ಕೆ ಚೀಫ್ ಕೋರ್ಟಿನವರಿಗೆ ಅಧಿಕಾರ ಕೊಡಬಹುದು.

(2) ಸದರೀ ಗವರ್ನಮೆಂಟಿನವರು ಯಾವಾಗಲಾದರು ತಮಗೆ ಯುಕ್ತವೆಂದು ತೋರಿದಾಗ ಈ ಸೆಕ್ಷನ್ ಅನುಸರಿಸಿ ಚೀಫ್ ಕೋರ್ಟಿನವರಿಗುಂಟುಮಾಡಲ್ಪಟ್ಟ ಸಾಧಾರಣ ಅಸಲ್ ಅಧಿಕಾರವನ್ನು ವಾಪಸು ತೆಗದುಕೊಂಡು ಹಾಗೆ ತೆಗದುಕೊಳ್ಳಲ್ಪಟ್ಟ ಅಧಿಕಾರವನ್ನು ಚಲಾಯಿಸುವ ಬಗ್ಗೆ ಪ್ರತ್ಯೇಕ ಒಬ್ಬ ಜೆಡ್ಜಿ ಯಾ ಜೆಡ್ಜಿಗಳನ್ನು ಮೊಕರರ್ರಾಡಬಹುದು.

(3) ಈ ಸೆಕ್ಷನ್ ಅನುಸರಿಸಿ ಚೀಫ್ ಕೋರ್ಟಿನವರಿಗೆ ಯಾವ ಸ್ಥಳ ಸರಹದ್ದುಗಳಿಂಗಿಗೆ ಸಾಧಾರಣ ಅಸಲ್ ಸಿವಿಲ್ ಅಧಿಕಾರವು ಉಂಟುಮಾಡಲ್ಪಟ್ಟಿರುತಿದೆಯೋ ಅಂತಾ ಸ್ಥಳ ಸರಹದ್ದುಗಳು ಸಿವಿಲ್ ಪ್ರೊಸಿಡ್ಯೂರ್‌ಕೋಡಿನ ಅರ್ಥಾನುಸಾರ ಬಂದು ಡಿಸ್ಟ್ರಿಕ್ಟಾಗಿ ಭಾವಿಸಲ್ಪಡತಕ್ಕದ್ದು.

(4) ಈ ಸೆಕ್ಷನ್ ಅನುಸರಿಸಿ ಚೀಫ್ ಕೋರ್ಟಿನವರಿಗೆ ಯಾವ ಸ್ಥಳ ಸರಹದ್ದುಗಳಿಂಗಿಗೆ ಸಾಧಾರಣ ಅಸಲ್ ಕ್ರಿಮಿನಲ್ ಅಧಿಕಾರ ಉಂಟು ಮಾಡಲ್ಪಟ್ಟಿರುತಿದೆಯೋ ಅಂತಾ ಸ್ಥಳ ಸರಹದ್ದುಗಳು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ಅರ್ಥಾನುಸಾರ ಬಂದು ಸೆಷನ್ಸ್ ಡಿವಿಜನಾಗಿ ಭಾವಿಸಲ್ಪಡತಕ್ಕದ್ದು.

(5) 12ನೇ ಸೆಕ್ಷನ್ನಿಂದ ಚೀಫ್ ಕೋರ್ಟಿನವರಿಗುಂಟುಮಾಡಲ್ಪಟ್ಟ ಸಾಧಾರಣ ಅಸಲ್ ಸಿವಿಲ್ ಅಧಿಕಾರವನ್ನು ಚಲಾಯಿಸುವ ಬಗ್ಗೆ ಚೀಫ್ ಕೋರ್ಟಿನವರು ಅಂತಾ ಕೋರ್ಟಿನ ಜೆಡ್ಜಿಗಳ ಪೈಕಿ ಒಬ್ಬರನ್ನು ನಿಯಮಿಸತಕ್ಕದ್ದಲ್ಲದೆ ಸದರೀ ಜೆಡ್ಜಿಯು ಮೇಲೆ ಕಂಡ ವಿಷಯಕ್ಕಾಗಿ "1883ನೇ ಇಸವಿಯ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ ಅನುಸರಿಸಿ ಮೇಲೆ ಕಂಡ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಜೆಡ್ಜಿಯಾಗಿ ಅವರು ಮೊಕರರ್ರಾಡಲ್ಪಟ್ಟಿದ್ದರೆ ಹ್ಯಾಗೋ ಅದೇ ರೀತಿಯಾಗಿ ಮತ್ತು ಅದೇ ನಡವಳಿತಕೊಳಪಟ್ಟು ತಮ್ಮ ಕೆಲಸಗಳನ್ನು ನಡೆಸತಕ್ಕದ್ದು.

(6) ಹನ್ನೆರಡನೆಯ ಸೆಕ್ಷನ್ನಿಂದ ಚೀಫ್ ಕೋರ್ಟಿಗೆ ಉಂಟು ಮಾಡಲ್ಪಟ್ಟ ಸಾಧಾರಣ ಅಸಲ್ ಕ್ರಿಮಿನಲ್ ಅಧಿಕಾರವನ್ನು ಚಲಾಯಿಸುವ ಬಗ್ಗೆ ಚೀಫ್ ಕೋರ್ಟಿನವರು ಅಂತಾ ಕೋರ್ಟಿನ ಜೆಡ್ಜಿಗಳ ಪೈಕಿ ಒಬ್ಬರನ್ನು ನಿಯಮಿಸತಕ್ಕದ್ದಲ್ಲದೆ ಸದರೀ ಜೆಡ್ಜಿಯು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ಅನುಸರಿಸಿ ಮೇಲೆ ಕಂಡ ಸೆಷನ್ಸ್ ಡಿವಿಜನ್ನಿಗೋಸ್ಕರ ಸೆಷನ್ಸ್ ಕೋರ್ಟು ಜೆಡ್ಜಿಯರಾಗಿ ಮೊಕರರ್ರಾಡಲ್ಪಟ್ಟಿದ್ದರೆ ಹ್ಯಾಗೋ ಅದೇ ರೀತಿಯಾಗಿ ಮತ್ತು ಬದಸ್ತೂರ್ ನಡವಳಿತಕ್ಕೊಳಪಟ್ಟು ತಮ್ಮ ಕೆಲಸಗಳನ್ನು ನಡೆಸತಕ್ಕದ್ದು.

ಚೀಫ್ ಕೋರ್ಟಿನವರು ಅಸಲ್ ಅಧಿಕಾರವನ್ನು ಚಲಾಯಿಸುವಾಗ್ಯೆ ಕೊಟ್ಟ ಫೈಸಲ್‌ಗಳ ಮೇಲೆ ಅಪ್ಪೀಲ್ ವಗೈರೆ.

"ಸೆಕ್ಷನ್ 13. 12ನೇಯನು ಸೆಕ್ಷನ್ನಿಂದ, ಅಥವಾ ತತ್ಕಾಲದೊಳು ಜಾರಿಯೊಳಗಿರುವ ಯಾವದಾದರು ಇತರ ಕಾನೂನಿನಿಂದ, ಚೀಫ್ ಕೋರ್ಟಿಗೆ ಉಂಟುಮಾಡಲ್ಪಟ್ಟ ಸಾಧಾರಣ ಅಸಲ್ ಸಿವಿಲ್ ವ ಕ್ರಿಮಿನಲ್ ಅಧಿಕಾರವನ್ನು ಚಲಾಯಿಸುವಾಗ್ಯೆ ಸದರೀ ಚೀಫ್ ಕೋರ್ಟಿನ ಒಬ್ಬ ಜೆಡ್ಜಿಯಿಂದ ಕೊಡಲ್ಪಟ್ಟ ಫೈಸಲ್‌ಗಳು, ಡಿಕ್ರಿಗಳು ಹುಕುಂಗಳು, ಅಥವಾ ಸೆಂಟೆನ್ಸಿಯಾನೆ ಸಜಾನಾಮೆಗಳು ಇವುಗಳ ಮೇಲಣ ಅಪೀಲ್‌ಗಳು ಅವುಗಳನ್ನು ಕುರಿತ ದಾಖಲೆಗಳು ಮತ್ತು ಅವುಗಳ ಪುನರ್ವಿಮರ್ಶೆಯ ಬಗ್ಗೆ ಅರ್ಜಿಗಳು, ನ್ಯಾಯಸಮ್ಮತವಾದರೆ ಚೀಫ್ ಕೋರ್ಟಿನ ಇತರ ಇಬ್ಬರು ಜೆಡ್ಜಿಗಳುಳ್ಳ ಬಂದು ಬೆಂಚಿನವರಿಂದಾಗಲಿ ಅಥವಾ ಮೇಲೆ ಕಂಡ ಕೋರ್ಟಿನ ಫುಲ್ ಬೆಂಚಿನವರಿಂದಾಗಲಿ, ಮೈಸೂರು ಗವರ್ನಮೆಂಟಿನವರು ಆಗಿಂದಾಗ್ಯೆ ಸರ್ಕಾರೀ ಗೆಜಟ್ಟಿನಲ್ಲಿ ಇಸ್ತಿಹಾರ್ ಮೂಲಕ ಹುಕುಂ ಮಾಡಬಹುದಾದ ರೀತಿಯಲ್ಲಿ ವಿಚಾರಿಸಲ್ಪಡತಕ್ಕದ್ದು. ಈ ಸೆಕ್ಷನ್ ಅನುಸರಿಸಿ ಇಬ್ಬರು ಜೆಡ್ಜಿಗಳು ಸೇರಿದ್ದ ಬಂದು ಬೆಂಚಿನವರ ವಿಚಾರಣೆಯಲ್ಲಿರತಕ್ಕ ಯಾವದಾದರು ಅಪೀಲ್, ದಾಖಲೆ ಯಾ ಅರ್ಜಿಯ ವಿಷಯದಲ್ಲಿ ಅವರಿಗೆ ಪರಸ್ಪರ ಭಿನ್ನಾಭಿಪ್ರಾಯ ವುಂಟಾದಾಗ, ಅವರ ಫೈಸಲ್, ಈ ರೆಗ್ಯುಲೇಷನಿನ 15ನೇ ಸೆಕ್ಷನಿನಲ್ಲಿ ಅಥವಾ ಸಿವಿಲ್ ಪ್ರೊಸಿಡ್ಯೂರ್ ಕೋಡ್ 575ನೇ ಸೆಕ್ಷನಿನಲ್ಲಿ ಅಥವಾ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 429ನೇ ಸೆಕ್ಷನಿನಲ್ಲಿ ಯೇನು ಅಡಗಿದ್ದಾಗ್ಯೂ ಅಸಲ್ ಫೈಸಲ್ ಡಿಕ್ರಿ, ಹುಕುಂ ಯಾ ಸೆಂಟೆನ್ಸಿಯಾನೇ ಸಜಾನಾಮೆಯನ್ನೆನುಸರಿಸಿದ್ದಾಗಿರತಕ್ಕದ್ದು.

ಕೆಳಕೋರ್ಟುಗಳ ಫೈಸಲ್‌ಗಳು ಮುಂತಾದವುಗಳ ಮೇಲಣ ಅಪೀಲಿಗಳನ್ನು ವಿಚಾರಿಸಿ ತೀರ್ಮಾನಿಸಲಿಕ್ಕೆ ಚೀಫ್ ಕೋರ್ಟಿನ ಅಧಿಕಾರ.

"ಸೆಕ್ಷನ್ 14. (1) ಮೈಸೂರು ಗವರ್ನಮೆಂಟಿನವರು ಯಾವಾಗಲಾದರು ತಮಗೆ ಯುಕ್ತತೋರಿದಾಗೆ ಆಗಿಂದಾಗ್ಯೆ ಸರ್ಕಾರೀ ಗೆಜಟ್ಟಿನಲ್ಲಿ ಇಸ್ತಿಹಾರ್‌ನಾಮೆಯ ಮೂಲಕ ಪ್ರಕಟನೆ ಗೊತ್ತುಮಾಡಬಹುದಾದ ಸ್ಥಳಸರಹದ್ದುಗಳಿಂಗಿಗೆ ತಾಬೇದಾರಿಯಾದ ಯಾವದಾದರು ಸಿವಿಲ್ ಯಾ ಕ್ರಿಮಿನಲ್ ಕೋರ್ಟಿನಿಂದ ಕೊಡಲ್ಪಟ್ಟ ಫೈಸಲ್‌ಗಳು ಹುಕುಂಗಳು, ಡಿಕ್ರಿಗಳು, ಯಾ ಸೆಂಟೆನ್ಸಿಯಾನೆ ಸಜಾ

ನಾಮೆಗಳು ಇಂತವುಗಳ ಮೇಲೆ ನ್ಯಾಯಸಮ್ಮತವಾಗಿ ಬಂದು ಡಿಸ್ಟ್ರಿಕ್ಟ್ ಕೋರ್ಟಗಾಗಲಿ ಯಾ ಸೆಷ್ಷ ಕೋರ್ಟಗಾಗಲಿ ಬರತಕ್ಕ ಯಲ್ಲಾ ಅಪೀಲಗಳನ್ನು ವಿಚಾರಿಸಿ ವ್ಯವಸ್ತೆ ಮಾಡತಕ್ಕ ಅಧಿಕಾರವನ್ನು 'ಚೀಫ್' ಕೋರ್ಟಿಗೆ ವುಂಟುಮಾಡಬಹುದು.

(2) ಮೇಲೆ ಕಂಡಂತಾ ಇನ್ಸ್ತಿಹಾರ್‌ನಾಮೆಯು ನೆಲೆಗೊಂಡಿರುವಾಗ್ಯೆ, ಅದರಿಂದ ಚೀಫ್' ಕೋರ್ಟಿನವರಿಗೆ ಕೊಡಲ್ಪಟ್ಟಿರುವ ಅಧಿಕಾರವು ಸದರೀ ಇನ್ಸ್ತಿಹಾರ್‌ನಾಮೆಯು ಕೊಡಲ್ಪಡದಿದ್ದರೆ ಸಾಧಾರಣವಾಗಿ ಡಿಸ್ಟ್ರಿಕ್ಟ್ ಯಾ ಸೆಷ್ಷ ಕೋರ್ಟಿನವರಿಗೆ ವುಂಟಾಗಿದ್ದರೂ ಸದರೀ ಡಿಸ್ಟ್ರಿಕ್ಟ್ ಯಾ ಸೆಷ್ಷ ಕೋರ್ಟಿನವರಿಂದ ಚಲಾಯಿಸಲ್ಪಡತಕ್ಕ ದ್ದಲ್ಲವು ಪರಂತು ಅಂತಾ ಡಿಸ್ಟ್ರಿಕ್ಟ್ ಯಾ ಸೆಷ್ಷನ್ಸ್ ಕೋರ್ಟಿನವರು ವಿಚಾರಣೆ ಮಾತಿ ವಿಮರ್ಶಿಸತಕ್ಕ ಬಗ್ಯೆ ಚೀಫ್' ಕೋರ್ಟಿನವರು ಅವರಿಗೆ ವರ್ಗಮಾಡಬಹುದಾದ ಅಪೀಲ್ ಮೊಕದ್ದಮೆಗಳ ವಿಷಯದಲ್ಲಿ ಸದರೀ ನಿಯಮವು ವಿನಾಯಿಸಲ್ಪಟ್ಟಿದ್ದಾಗಿರುತಿದೆ.

(3) ಮೈಸೂರು ಗವರ್ನಮೆಂಟಿನವರು ಯಾವಾಗಲಾದರು ಯುಕ್ತವೆಂದು ಭಾವಿಸಿದಾಗ ಈ ಸೆಕ್ಷನ್ ಅನುಸರಿಸಿ ಚೀಫ್' ಕೋರ್ಟಿಗೆ ವುಂಟುಮಾಡಲ್ಪಟ್ಟ ಯಾವದಾದರು ಅಪೀಲ್ ಅಧಿಕಾರವನ್ನು ಸರ್ಕಾರೀ ಗೆಜಟಿನಲ್ಲಿ ಬಂದು ಇನ್ಸ್ತಿಹಾರ್‌ನಾಮೆಯ ಮೂಲಕ ವಾಪಸ್ ತೆಗದುಕೊಳ್ಳಬಹುದು.

"ಸೆಕ್ಷನ್ 15. (1) ತತ್ಕಾಲದಲ್ಲಿ ಜಾರಿಯೊಳಗಿರುವ ಯಾವದಾದರು ಕಾನೂನ್ ಅನುಸರಿಸಿ ಚೀಫ್' ಕೋರ್ಟಿಗೆ ದಾಖಲಾಗತಕ್ಕ 13ನೇ ಸೆಕ್ಷನಿನಲ್ಲಿ ನಮೂದಾಗಿರುವ ಅಪೀಲ್‌ಗಳು ವಿನಾ, ಇತರ ತಮಾಂ ಸಿವಿಲ್ ವ ಕ್ರಿಮಿನಲ್ ಅಪೀಲ್‌ಗಳೂ ಮತ್ತು ಫಾಸೀ ಸಜಾವನ್ನು ಕಾಯಂ ಮಾಡತಕ್ಕ ಬಗ್ಯೆ ಚೀಫ್' ಕೋರ್ಟಿಗೆ ರಿಫರ್ ಮಾಡಲ್ಪಟ್ಟ ತಮಾಂ ಮೊಕದ್ದಮೆಗಳೂ ಸದರೀ ಕೋರ್ಟಿನ ಇಬ್ಬರು ಜೆಡ್ಜಿಗಳಿಗೆ ಕಡಮೆ ಇಲ್ಲದೆ ಬೆಂಚಿನವರಿಂದ ವಿಚಾರಿಸಲ್ಪಡತಕ್ಕದ್ದು.

ಹದಿಮೂರನೆಯ ಸೆಕ್ಷನ ಪ್ರಕಾರ ಅಪೀಲ್‌ಗಳು ವಿನಾ ಮಿಕ್ಕ ಅಪೀಲ್‌ಗಳು ಜೆಡ್ಜಿಗಳ ಬೆಂಚಿನವರಿಂದ ದರ್ಯಾಫ್ತ ಮಾಡಲ್ಪಡತಕ್ಕದ್ದು.

(2) ತತ್ಕಾಲದೊಳು ಜಾರಿಯಲ್ಲಿರುವ ಕಾನೂನ್ ಅನುಸರಿಸಿ ಮತ್ಯಾವ ಅಪೀಲ್ ಇರುವದಿಲ್ಲವೋ ಅಂತಾ ಕಾನೂನಿನ ಅಥವಾ ಕಾನೂನ್ ಬಲವುಳ್ಳ ವಾಡಿಕೆಯ, ಯಾವದಾದರು ವಿಚಾರ ಯಾವದಾದರು ದಸ್ತಾವೇಜಿನ ಅಭಿಪ್ರಾಯ ಅಥವಾ ಕೋರ್ಟಿನಮುಂದೆ ವಿಚಾರಣೆಯೊಳಗಿರುವ, ನಡವಳಿತದಲ್ಲಿ ಯಾವದಾದರು ಸಾಫ್ಟ್ಯದ ಅಂಗೀಕಾರಾರ್ಹತೆ, ಇಂತಾದ್ದರ ಯಾವ ಅಂಶವನ್ನಾಗಲಿ ಚೀಫ್ ಕೋರ್ಟಿನ ಜೆಡ್ಜಿಗಳ ಯಾವ ಬೆಂಚಿನವರಾದರು ಸದರೀ ಕೋರ್ಟಿನ ಬಂದು ಫುಲ್ ಬೆಂಚಿಗೆ ರಿಫರ್ ಮಾಡಬಹುದು.

(3) ಚೀಫ್' ಕೋರ್ಟಿನ ಯಾವ ಫುಲ್ ಬೆಂಚಿಗಾಗಲಿ, ಸೇರಿರುವ ಜೆಡ್ಜಿಗಳ ಪೈಕಿ ಅಧಿಕ ಸಂಖ್ಯೆಯವರ ಅಥವಾ ಮೂವರು ಜೆಡ್ಜಿಗಳಿಗೆ ಕಡಮೆ ಯಿಲ್ಲದಂತೆ ಸೇರಿರುವ ಇತರ ಬೆಂಚಿನವರ ತೀರ್ಪು ಚೀಫ್' ಕೋರ್ಟಿನ ತೀರ್ಪಾಗಿರತಕ್ಕದ್ದು. ಚೀಫ್' ಕೋರ್ಟಿನ ಬಂದು ಬೆಂಚಿಗೆ ಇಬ್ಬರು ಜೆಡ್ಜಿಗಳು ಮಾತ್ರ ಸೇರಿದ್ದ ಪಕ್ಷಕ್ಕೆ ಮತ್ತು ಅಂತಾ ಕೋರ್ಟಿನ ಮುಂದೆ ವಿಚಾರಣೆಯಲ್ಲಿರುವ ಯಾವದಾದರು ಮುಖ್ಯಾಂಶದಲ್ಲಿ ಅಂತಾ ಜೆಡ್ಜಿಗಳಿಗೆ ಪರಸ್ಪರ ಅಭಿಪ್ರಾಯ ಭೇದವುಂಟಾಗಿದ್ದರೆ, ಅಂತಾ ಅಂಶವು ಬಂದು ಫುಲ್ ಬೆಂಚಿಗೆ ರಿಫರ್ ಮಾಡಲ್ಪಟ್ಟು, ಅಂತಾ ಫುಲ್ ಬೆಂಚಿನಲ್ಲಿ ಹೆಚ್ಚು ಸಂಖ್ಯೆಯುಳ್ಳ ಜೆಡ್ಜಿಗಳ ಫೈಸಲ್ ಚೀಫ್' ಕೋರ್ಟಿನ ಫೈಸಲಾಗಿರತಕ್ಕದ್ದು."

"ಸೆಕ್ಷನ್ 16. ಚೀಫ್' ಕೋರ್ಟಿನವರು ಯಾವಾಗಲಾದರು ತಮಗೆ ಯುಕ್ತತೋರಿದಾಗ ತಮ್ಮಲ್ಲಿ ವಿಚಾರಣೆಯಲ್ಲಿರತಕ್ಕ ಯಾವದಾದರು, ಸಿವಿಲ್ ಯಾ ಕ್ರಿಮಿನಲ್ ಸ್ವಭಾವವುಳ್ಳ ಅಸಲ್ ಯಾ ಅಪೀಲ್ ಮೊಕದ್ದಮೆಯನ್ನು ಈ ರೆಗ್ಯುಲೇಷನಿನ 12 ಮತ್ತು 14ನೇ ಸೆಕ್ಷನ್‌ಗಳಲ್ಲಿ ಕಂಡ ಸ್ಥಳ ಸರಹದ್ದುಗಳೊಳಗಿರಲಿ, ಯಾ ಅವುಗಳ ಹೊರಗಿರಲಿ ತಕ್ಕ ಅಧಿಕಾರವುಳ್ಳ ಯಾವ ಕೋರ್ಟಿಗಾಗಲಿ, ವರ್ಗ ಮಾಡಬಹುದು."

ಚೀಫ್' ಕೋರ್ಟಿನವರ ಮುಂದೆ ವಿಚಾರಣೆಯಲ್ಲಿರತಕ್ಕ ಮೊಕದ್ದಮೆಗಳನ್ನು ವರ್ಗ ಮಾಡಲಿಕ್ಕೆ ಅವರ ಅಧಿಕಾರ.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ದಿವಾ.

Mysore Government Central Press, Bangalore.—1890.